9, (110) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೀದರ್ ಜಿಲ್ಲೆಯ, ಔರಾದ್ ತಾಲ್ಲೂಕು ಗಡಿ ಭಾಗದಲ್ಲಿ ಬರುತ್ತಿದ್ದು ಈ ಭಾಗದ ಬಹುಕೇತ ಹೆದ್ದಾರಿಗಳು ಅತ್ಯಂತ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರಾದೇಶಿಕ ಅಸಮತೋಲನಾ ನಿವಾರಣೆ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ಶಿಫಾರಸ್ಸಿನ ಅನ್ವಯ ಔರಾದ್ ತಾಲ್ಲೂಕಿನ ಗಡಿ ಭಾಗದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ಹೆದ್ದಾರಿಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು ಸರ್ಕಾರದ ಮುಂದಿರುವ ಕ್ರಮಗಳೇನು; ?

ಇ) ತಾಲ್ಲೂಕಿನ ಯಾವ ಯಾವ ರಸ್ತೆಗಳನ್ನು ಹಾಗೂ ಎಷ್ಟು ಕಿಲೋಮೀಟರ್ ರಸ್ತೆಗಳನ್ನು ಪ್ರಸಕ್ತ ಸಾಲಿನಲ್ಲಿ ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುವುದು; ?

ಈ) ಇದಕ್ಕೆ ತಗಲುವ ವೆಚ್ಚವೆಷ್ಟು ಹಾಗೂ ಇದರ ಅಂದಾಜು ವೆಚ್ಚ ಪತ್ರಿಕೆ ತಯಾರಾಗಿದೆಯೇ; ?

ಉ) ತಾಲ್ಲೂಕಿನಲ್ಲಿ ಈಗ ಯಾವ ಯಾವ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿವೆ; ?

ಊ) ಹೊಸ ಕಾಮಗಾರಿಗಳನ್ನು ಯಾವಾಗ ತೆಗೆದುಕೊಳ್ಳಲಾಗುವುದು?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಬಂದಿದೆ.

ಆ) ಪ್ರಾದೇಶಿಕ ಅಸಮತೋಲನಾ ನಿವಾರಣೆ ಸಮಿತಿಯು ಸಲ್ಲಿಸಿರುವ ಶಿಫಾರಸ್ಸಿನನ್ವಯ ತಾಲ್ಲೂಕಿನ ಗಡಿ ಭಾಗದ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ರಸ್ತೆ ನಿಧಿ ಆಯವ್ಯಯದ ಲೆಕ್ಕ ಶೀರ್ಷಿಕೆ 5054ರ ಅಡಿ ಮತ್ತು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಮುಖಾಂತರ ಮೂರು ವರ್ಷಗಳ ಅವಧಿಗೆ ತೆಗೆದುಕೊಂಡಿರುವ ನಿರ್ವಹಣೆ ಕಾರ್ಯಕ್ರಮದಡಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಈ ಕೆಳಕಂಡ ರಸ್ತೆಗಳನ್ನು ವಿವಿಧ ಯೋಜನೆಗಳಡಿ ಅಭಿವೃದ್ಧಿಪಡಿಸಲಾಗುತ್ತಿದೆ.

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ

(3 ವರ್ಷಗಳ ನಿರ್ವಹಣೆ)

1. ವನಮಾರಗಡಲ್ಲಿ ರಾಯಚೂರು ರಸ್ತೆ	–	32.00 ಕಿ.ಮೀ.
2. ಕಮಾಲನಗರ ಗೂನಳ್ಳಿ ರಸ್ತೆ	–	14.70 ಕಿ.ಮೀ.

3. ಔರಾದ್–ಸದಾಶಿವನಗರ ರಸ್ತೆ	–	20.00 ಕಿ.ಮೀ.
ಆ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ		
1. ಔರಾದ್ ಮುರ್ಕಿ ಗಡಿ ರಸ್ತೆ	–	5.20 ಕಿ.ಮೀ.
ಇ) 5054 ಲೆಕ್ಕ ಶೀರ್ಷಿಕೆಯಡಿ		
1. ವಡಗಾಂವ್ ಕಂದಗೊಳ ರಸ್ತೆ	–	10.03 ಕಿ.ಮೀ.
2. ಸಂತಪೂರ ನಾರಾಯಣಖೇಡ ರಸ್ತೆ	–	2.00 ಕಿ.ಮೀ.
3. ಸಂಗಮ ಕುಶನೂರ ಸಂತಪೂರ ರಸ್ತೆ	–	3.00 ಕಿ.ಮೀ.
4. ಕುಶನೂರ ಬಾವಲಗಾಂವ ರಸ್ತೆ	–	1.00 ಕಿ.ಮೀ.
5. ಮುರ್ಕಿ ಕರಂಜಿ ಗಡಿ ರಸ್ತೆ	–	3.00 ಕಿ.ಮೀ.
ಈ) ನಬಾರ್ಡ್ ಯೋಜನೆ (2005–06)		
1. ವಲ್ಲಾಪುರ ಸಲಾರಹಳ್ಳಿ ಕ್ರಾಸ್ ರಸ್ತೆ ಅಭಿವೃದ್ಧಿ	–	3.30 ಕಿ.ಮೀ.

ಈ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ನಿರ್ವಹಿಸಲಾಗುತ್ತಿರುವ 3 ವರ್ಷಗಳ 3 ರಾಜ್ಯ ಹೆದ್ದಾರಿಗಳ ನಿರ್ವಹಣೆಗೆ ರೂ.2.00 ಕೋಟಿಗಳಾಗುತ್ತವೆ ಹಾಗೂ ನಬಾರ್ಡ್ ಯೋಜನೆಯಡಿ ಕೈಗೊಳ್ಳುವ ವಲ್ಲಾಪುರ ಸಲಾರಹಳ್ಳಿ ಕ್ರಾಸ್ ರಸ್ತೆ ಅಭಿವೃದ್ಧಿಗೆ ರೂ.30.00 ಲಕ್ಷಗಳಾಗುತ್ತದೆ. ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದೆ.

ಉ) ಮೇಲಿನ ಆ ಮತ್ತು ಇ ಉತ್ತರಗಳಲ್ಲಿರುವಂತೆ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿವೆ.

ಊ) ನಬಾರ್ಡ್–II ರ ಅಡಿಯಲ್ಲಿ (1) ಸಾವರಗಾಂವ ಹಂಗರಗಾ ಗಡಿ ರಸ್ತೆ ಮತ್ತು (2) ಬಾವಲಗಾಂವ ಹಳ್ಳಿ ಸಮೀಪ ಸೇತುವೆ ನಿರ್ಮಾಣದ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ನಬಾರ್ಡ್ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

10, (103) ಶ್ರೀ ಹಾಲಪ್ಪ ಹೆಚ್. : ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಯುವಜನ ಮೇಳಗಳಿಗೆ ಸರ್ಕಾರದಿಂದ ನೀಡುವ ಅನುದಾನವೆಷ್ಟು; (ಜಿಲ್ಲಾ ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಸರ್ಕಾರದಿಂದ ನೀಡುವ ಅನುದಾನದಿಂದಲೇ ಯುವಜನ ಮೇಳಗಳನ್ನು ನಡೆಸಲಾಗುತ್ತಿದೆಯೇ; ?

ಇ) ಅನುದಾನವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆಯೇ; ?